# ಕರ್ನಾಟಕ ವಿಧಾನ ಪರಿಷತ್ತು

| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 152 |
|---|---|
| ಸದಸ್ಯರ ಹೆಸರು | ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 05.12.2023 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಅನಧಿಕೃತ ನಿಯಮ ಬಾಹಿರವಾಗಿ ಗಣಿಗಾರಿಕೆ, ಜಲ್ಲಿ ಕ್ರಷರ್, ಎಂ-ಸ್ಯಾಂಡ್ ಉತ್ಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗೂ ಈ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಜಲ್ಲಿ ಕ್ರಷರ್‌ಗಳ ವಿವರ ನೀಡುವುದು; | ಬಂದಿರುತ್ತದೆ.<br>ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 03 ವರ್ಷಗಳಲ್ಲಿ ಅನಧಿಕೃತ ಕಲ್ಲುಗಣಿಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ಪ್ರಕರಣಗಳನ್ನು ದಾಖಲಿಸಿ ದಂಡವನ್ನು ಸಂಗ್ರಹಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ. |

| ಕ್ರ ಸಂ | ವರ್ಷ | ಗಣಿಗಾರಿಕೆ/ ಸಾಗಾಣಿಕೆ ಪ್ರಕರಣಗಳ ಸಂಖ್ಯೆ | ದಂಡ (₹ ಗಳಲ್ಲಿ) | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ |
|---|---|---|---|---|
| 1 | 2021-22 | 160 | 84,53,839/- | 3 |
| 2 | 2022-23 | 256 | 1,46,17,935/- | 0 |
| 3 | 2023-24 | 127 | 81,88,092/- | 1 |
| | ಒಟ್ಟು | 543 | 3,12,59,866/- | 4 |

ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿ ನಿಯಮಬಾಹಿರವಾಗಿ ಸ್ಟೋನ್ ಕ್ರಷರ್ ಘಟಕಗಳನ್ನು ನಡೆಸುವವರ ವಿರುದ್ಧ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಆಗಿಂದ್ದಾಗ್ಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, 2020-21, 2021-22 ನೇ ಸಾಲಿನಲ್ಲಿ ನಿಯಮಬಾಹಿರವಾಗಿ ಕಾರ್ಯ ನಿರ್ವಹಿಸಿರುವ ಸ್ಟೋನ್ ಕ್ರಷರ್ ಘಟಕಗಳ ಪ್ರಕರಣಗಳು ಕಂಡುಬಂದಿರುವುದಿಲ್ಲ ಹಾಗೂ 2022-23ನೇ ಸಾಲಿನಲ್ಲಿ 04 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ₹20,00,000/- ಗಳ ದಂಡ ವಿಧಿಸಿ ಸಂಗ್ರಹಿಸಲಾಗಿರುತ್ತದೆ.

ಕೋಲಾರ ಜಿಲ್ಲೆಯಲ್ಲಿ 40 ಸ್ಟೋನ್ ಕ್ರಷರ್ ಘಟಕಗಳಿಗೆ ಲೈಸೆನ್ಸ್ ನೀಡಲಾಗಿರುತ್ತದೆ. ಈ ಪೈಕಿ 05 ಕ್ರಷರ್ ಘಟಕಗಳಿಗೆ ನಿಯಮ (7) ರಡಿಯಲ್ಲಿ ಸರ್ಕಾರಿ ಕಾಮಗಾರಿಗಳಿಗಾಗಿ -

| | | |
|---|---|---|
| | | -ಅನುಮತಿ ನೀಡಲಾಗಿರುತ್ತದೆ. ಕೋಲಾರ ಜಿಲ್ಲೆಯಲ್ಲಿ ಮಂಜೂರು ಮಾಡಲಾದ ಕ್ರಷರ್, ಎಂ-ಸ್ಯಾಂಡ್ ಘಟಕಗಳ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಆ) | ಇಂತಹ ಅನಧಿಕೃತ ನಿಯಮಬಾಹಿರ ಗಣಿಗಾರಿಕೆಗಳಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 125.00 ಕೋಟಿಗಳಷ್ಟು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ವ್ಯವಹಾರಗಳಲ್ಲಿ ಜಿಲ್ಲಾ ಗಣಿಗಾರಿಕೆ ಇಲಾಖೆ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಅನಧಿಕೃತ ನಿಯಮ ಬಾಹಿರವಾಗಿ ಗಣಿಗಾರಿಕೆ, ಜಲ್ಲಿ ಕ್ರಷರ್, ಎಂ-ಸ್ಯಾಂಡ್ ಉತ್ಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>➢ ಕೋಲಾರ ಜಿಲ್ಲೆಯ ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ ಮತ್ತು ಕೋಲಾರ ತಾಲ್ಲೂಕು ವ್ಯಾಪ್ತಿಗಳಲ್ಲಿ ಉಪಖನಿಜದ ಅನಧಿಕೃತ ಗಣಿಗಾರಿಕೆ / ಸಾಗಾಣಿಕೆ ಸಂಬಂಧ ಸ್ವೀಕೃತಗೊಂಡ ದೂರುಗಳ ಮೇರೆಗೆ ಕಲ್ಲುಗಣಿ ಗುತ್ತಿಗೆ ಪ್ರದೇಶಗಳನ್ನು ಡ್ರೋಣ್ ಉಪಕರಣಗಳಿಂದ ಸರ್ವೆ ಕಾರ್ಯ ನಡೆಸಲಾಗಿರುತ್ತದೆ. ಸದರಿ ಸರ್ವೆ ಕಾರ್ಯದ ವರದಿಯಂತೆ, ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಹಾಗೂ ಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿ ಉಪಖನಿಜವನ್ನು ತೆಗೆದು ಖನಿಜ ರವಾನೆ ಪರವಾನಗಿ ಇಲ್ಲದೆ ಸಾಗಾಣಿಕೆ ಮಾಡಿರುವುದನ್ನು ಪತ್ತೆ ಹಚ್ಚಲಾಗಿರುತ್ತದೆ.<br>➢ ಹೆಚ್ಚುವರಿಯಾಗಿ ಉಪಖನಿಜ ತೆಗೆದು ಸಾಗಾಣಿಕೆ ಮಾಡಿರುವ 34.08 ಲಕ್ಷ ಮೆಟ್ರಿಕ್ ಟನ್ ಪ್ರಮಾಣಕ್ಕೆ ರಾಜಧನದ 05 ಪಟ್ಟು ದಂಡ ₹95.72 ಕೋಟಿಗಳಷ್ಟು ಅಂದಾಜಿಸಿದ್ದು, ಈ ಪೈಕಿ 01 ಪಟ್ಟು ರಾಜಧನ ₹12.60 ಕೋಟಿಗಳನ್ನು ಪಾವತಿಸಿ ಕೊಳ್ಳಲಾಗಿರುತ್ತದೆ.<br>➢ 2018-19ನೇ ಸಾಲಿನಲ್ಲಿ Drone/ DGPS ಸಮೀಕ್ಷೆ ವರದಿಯನುಸಾರ ದಂಡ ವಿಧಿಸಿ ಪಾವತಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಜಾರಿ ಮಾಡಿರುವ ನೋಟೀಸುಗಳನ್ನು ಪ್ರಶ್ನಿಸಿ ಕೆಲವು ಕಲ್ಲು ಗಣಿ ಗುತ್ತಿಗೆದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿರುತ್ತಾರೆ.<br>➢ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ 29870/2019 ಎಸ್.ಎನ್.ಶ್ರೀನಿವಾಸ ಶೆಟ್ಟಿ ವಿರುದ್ಧ ರಾಜ್ಯ ಸರ್ಕಾರ ಪ್ರಕರಣದ ಆದೇಶ ದಿನಾಂಕ 03.12.2019 ಮತ್ತು ರಿಟ್ ಅರ್ಜಿ ಸಂಖ್ಯೆ 13252/2019 ಎಸ್.ಆರ್.ಸ್ಟೋನ್ ಕ್ರಷರ್ ವಿರುದ್ಧ ರಾಜ್ಯ ಸರ್ಕಾರ ಪ್ರಕರಣದ ಆದೇಶ ದಿನಾಂಕ 28.11.2019 ರಲ್ಲಿ, ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಡ್ರೋಣ್ ಉಪಕರಣದ ಸಹಾಯದಿಂದ ಸರ್ವೆ ಕಾರ್ಯ ನಡೆಸಿರುವ ಕ್ರಮವನ್ನು ಎತ್ತಿ ಹಿಡಿದು ಕಲ್ಲುಗಣಿ ಗುತ್ತಿಗೆದಾರರ ಸಮ್ಮುಖದಲ್ಲಿ ಡ್ರೋಣ್ ಸರ್ವೆ ಕಾರ್ಯ ನಡೆಸಿ ಸದರಿಯವರು ಹೆಚ್ಚುವರಿಯಾಗಿ ಉಪಖನಿಜ ತೆಗೆದು ಸಾಗಾಣಿಕೆ ಮಾಡಿದ್ದಲ್ಲಿ, ದಂಡ ಸಂಗ್ರಹಿಸಲು ಅಗತ್ಯ ಕ್ರಮಜರುಗಿಸುವಂತೆ ನಿರ್ದೇಶಿಸಿದ್ದು, 2018-19ನೇ ಸಾಲಿನ ಡ್ರೋಣ್ ಸರ್ವೆ ವರದಿಯಂತೆ ಕಲ್ಲುಗಣಿ ಗುತ್ತಿಗೆದಾರರಿಗೆ ದಂಡ ಪಾವತಿಸುವಂತೆ ಸೂಚಿಸಿ ಜಾರಿ ಮಾಡಿರುವ ನೋಟೀಸ್‌ಗಳನ್ನು ವಜಾಗೊಳಿಸಿರುತ್ತದೆ. |

. . . 3

| | | |
|---|---|---|
| | | ➢ ಕಲ್ಲುಗಣಿ ಗುತ್ತಿಗೆದಾರರಿಂದ ಒಂದು ಪಟ್ಟು ರಾಜಧನ ಸಂಗ್ರಹಿಸಿದ್ದು, ರಾಜಧನ ಪಾವತಿಸದೆ ಇರುವ 06 ಕಲ್ಲುಗಣಿ ಗುತ್ತಿಗೆಗಳನ್ನು ರದ್ದುಪಡಿಸಲಾಗಿರುತ್ತದೆ.<br>➢ ಕೋಲಾರ ಜಿಲ್ಲೆಯಲ್ಲಿನ ಗಣಿ ಗುತ್ತಿಗೆದಾರರೊಂದಿಗೆ ಇಲಾಖೆ ಅಧಿಕಾರಿಗಳು ಶಾಮೀಲಾಗಿರುವುದು ಕಂಡು ಬಂದಿರುವುದಿಲ್ಲ. |
| ಇ) | ಬಂದಿದ್ದಲ್ಲಿ ಈ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ➢ ಮಾನ್ಯ ಉಚ್ಚನ್ಯಾಯಾಲಯದ ನಿರ್ದೇಶನದನ್ವಯ ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗಿದ್ದು, ಪ್ರಸ್ತುತ ಕೋಲಾರ ಜಿಲ್ಲೆಯಲ್ಲಿ ಸರ್ವೆ ಕಾರ್ಯ ಮುಕ್ತಾಯಗೊಂಡು ದತ್ತಾಂಶ ವಿಶ್ಲೇಷಣೆ ಪ್ರಗತಿಯಲ್ಲಿರುತ್ತದೆ.<br>➢ ಡ್ರೋಣ್ ಸರ್ವೆಯ ಅಂತಿಮ ವರದಿಯಂತೆ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಉಪಖನಿಜ ಉತ್ಪಾದಿಸಿ ಖನಿಜ ರವಾನೆ ಪರವಾನಿಗೆ ಪಡೆಯದೆ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ನಿಯಮಾನುಸಾರ ಕ್ರಮವಹಿಸಲಾಗುವುದು.<br>➢ ಮುಂದುವರೆದು, ಸರ್ಕಾರವು, ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಹಾಗೂ ಗುತ್ತಿಗೆ ಪ್ರದೇಶಕ್ಕೆ ಹೊಂದಿಕೊಂಡಂತೆ ಒತ್ತುವರಿ ಮಾಡಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಉಪ ಖನಿಜವನ್ನು ತೆಗೆದು ರಾಜಧನವನ್ನು ಪಾವತಿಸದೆ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ವಿಧಿಸಿರುವ ದಂಡವನ್ನು One Time Settlement (OTS) ಮೂಲಕ ಅನುಷ್ಠಾನಗೊಳಿಸುವ ಸಂಬಂಧ ಶಿಫಾರಸ್ಸುಗಳನ್ನು ಮಾಡಲು ಮಾನ್ಯ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 21.08.2023 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿರುತ್ತದೆ.<br>➢ ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸಿನ ಮೇಲೆ ಮಾನ್ಯ ಸಚಿವ ಸಂಪುಟವು ಕೈಗೊಳ್ಳುವ ನಿರ್ಧಾರದಂತೆ ಕಲ್ಲು ಗಣಿ ಗುತ್ತಿಗೆದಾರರಿಗೆ ವಿಧಿಸಿರುವ ದಂಡವನ್ನು ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ ಸಿಐ -ಎಂಎಂಎನ್/234/2023

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-1

# ಕೋಲಾರ ಜಿಲ್ಲೆಯಲ್ಲಿ ಲೈಸೆನ್ಸ್ ನೀಡಿರುವ ಸ್ಟೋನ್ ಕ್ರಷರ್ ಘಟಕಗಳ ವಿವರ

| ಕ್ರ ಸಂ. | ಪ್ರಸ್ತುತ 'ಸಿ' ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಿಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| **ಬಂಗಾರಪೇಟೆ ತಾಲ್ಲೂಕು** | | | | | | | |
| 1 | 2022-23<br>20-09-2021<br>ರಿಂದ 19-09-2023<br>2 ವರ್ಷ | ಮೆ॥ ದಿಲೀಪ್ ಬಿಲ್ಡ್ ಕಾನ್ ಲಿಮಿಟೆಡ್<br>#07, ವಾರ್ಡ್ ನಂ. 20, ಗೋರುರಮ್ಮ ಲೇಔಟ್, ಆದರ್ಶನಗರ<br>ಮಾಲೂರು ತಾಲ್ಲೂಕು | ಬಂಗಾರಪೇಟೆ | ಸೂಲಿಕುಂಟೆ | 133/1 & 133/2 | ಪಟ್ಟಾ | 2-00 |
| **ಕೋಲಾರ ತಾಲ್ಲೂಕು** | | | | | | | |
| 1 | 30-03-2017<br>20 ವರ್ಷ | ಬೈಯಣ್ಣ<br>ಅಂಜನೇಯ ಸ್ಟೋನ್ ಕ್ರಷರ್<br>ಚಾಕರಸನಹಳ್ಳಿ ಗ್ರಾಮ<br>ಕೋಲಾರ ತಾಲ್ಲೂಕು | ಕೋಲಾರ | ಚಾಕರಸನಹಳ್ಳಿ | 175/1&2 | ಪಟ್ಟಾ | 1-00 |
| 2 | 10-09-2018<br>20 ವರ್ಷ | ಡಿ.ರವಿಕುಮಾರ್<br>ಕೆ.ಬಿ.ಹೊಸಹಳ್ಳಿ ಗ್ರಾಮ<br>ಕೋಲಾರ | ಕೋಲಾರ | ಚಾಕರಸನಹಳ್ಳಿ | 240 | ಪಟ್ಟಾ | 2-00 |
| 3 | 1) 14-06-2013<br>2) 05-01-2019 | ಸಿ.ಸೊಣ್ಣೇಗೌಡ<br>ಜಿ.ಎಸ್.ಜಿ. ರೆಡಿ ಮಿಕ್ಸ್ ಕಂಕ್ರಿಟ್<br>ಮೇಡಿಹಾಳ ಗ್ರಾಮ<br>ಕೋಲಾರ ತಾಲ್ಲೂಕು & ಜಿಲ್ಲೆ | ಕೋಲಾರ | ಮೇಡಿಹಾಳ | 56 | ಪಟ್ಟಾ | 1-18 |
| 4 | 05-01-2019 | ಮೆ ಮೂಕಾಂಬಿಕ ಸ್ಟೋನ್ ಕ್ರಷರ್ಸ್<br>ಪ್ರೊ ಎಸ್.ಎಂ. ನಂದೀಶ್‌ಗೌಡ<br>ಚಾಕರಸನಹಳ್ಳಿ ಗ್ರಾಮ<br>ನರಸಾಪುರ ಹೋಬಳಿ<br>ಕೋಲಾರ ತಾಲ್ಲೂಕು & ಜಿಲ್ಲೆ | ಕೋಲಾರ | ಚಾಕರಸನಹಳ್ಳಿ | 238 | ಪಟ್ಟಾ | 1-31 |
| 5 | 1) 30-10-2014<br>2) 15-02-2020 | ಆರ್.ಎಸ್.ರಾಕ್ ಸ್ಯಾಂಡ್<br>ಬೆಟ್ಟಹೊಸಪುರ ಗ್ರಾಮ<br>ಕೋಲಾರ ತಾಲ್ಲೂಕು | ಕೋಲಾರ | ಬೆಟ್ಟಹೊಸಪುರ | 36 | ಸರ್ಕಾರಿ | 2-00 |

| ಕ್ರ ಸಂ. | ಪ್ರಸ್ತುತ 'ಸಿ' ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |

## ಮಾಲೂರು ತಾಲ್ಲೂಕು

| | | | | | | | |
|---|---|---|---|---|---|---|---|
| 1 | 1) 23-11-2013<br>2) 23-11-2018<br>3) 02-08-2022 | ಈಶ್ವರ್ ಸ್ಟೋನ್ ಕ್ರಷರ<br>ಪಾಲುದಾರರು ಜಿ.ಕೆ.ಶ್ರೀನಾಥ್<br>ಜಿ.ಕೆ.ಎಸ್. ಸ್ಟೋನ್ ಕ್ರಷರ್ಸ್<br>205, ಮಾಕಾರಹಳ್ಳಿ ಗ್ರಾಮ<br>ಮಾಲೂರು ತಾಲ್ಲೂಕು | ಮಾಲೂರು | ಮಾಕಾರಹಳ್ಳಿ | 205 | ಪಟ್ಟಾ | 2-00 |
| 2 | 17-12-2018 | ಮೆ॥ ನೂಟವೇ ಸ್ಟೋನ್ ಕ್ರಷರ್<br>ಹರದಕೊತ್ತೂರು ಗ್ರಾಮ<br>ಮಾಲೂರು ತಾಲ್ಲೂಕು | ಮಾಲೂರು | ಹರದಕೊತೂರು | 12 | ಪಟ್ಟಾ | 3-02 |
| 3 | 1) 11.10.2013<br>2) 5.01.2019 | ಮೆ॥ ನಾಗದೇವಿ ಸ್ಟೋನ್ ಕ್ರಷರ್<br>ಪಾರ್ಟನರ್ ಸರ್ವಜಿತ್ ಸಿಂಗ್<br>ಹರದಕೊತ್ತೂರು ಗ್ರಾಮ<br>ಸರ್ವೆ ನಂ. 30, ಮಾಲೂರು ತಾಲ್ಲೂಕು | ಮಾಲೂರು | ಹರದಕೊತೂರು | 30 | ಪಟ್ಟಾ | 1-20 |
| 4 | 08.03.2019 | ಮೆ॥ ಬಾಲಾಜಿ ಸ್ಟೋನ್ ಕ್ರಷರ್<br>ಪ್ರೊ ಶ್ರೀ ಕೆ.ವೆಂಕಟೇಶ್ವರಲು<br>ಹರದಕೊತ್ತೂರು ಗ್ರಾಮ<br>ಮಾಲೂರು ತಾಲ್ಲೂಕು<br>ಕೋಲಾರ | ಮಾಲೂರು | ಹರದಕೊತೂರು | 33 | ಪಟ್ಟಾ | 2-00 |
| 5 | 10-05-2019 | ಮೆ॥ ಆಲ್ಫಾ ಗ್ರಾನೈಟ್<br>ಪ್ರೊ ಶ್ರೀ ಫೈಜಲ್ ಷೇರೀಫ್<br>ಬಂದಾರ್ಲಹಳ್ಳಿ ಗ್ರಾಮ<br>ಮಾಲೂರು ತಾಲ್ಲೂಕು<br>ಕೋಲಾರ | ಮಾಲೂರು | ಬಂದಾರ್ಲಹಳ್ಳಿ | 35/1 | ಪಟ್ಟಾ | 1-24 |
| 6 | 01/2019-20<br>14-06-2013<br>04-05-2019 | ಮೆ॥ ಶ್ರೀ ಪ್ರಿಯಾದರ್ಶಿನಿ ಸ್ಟೋನ್ ಕ್ರಷರ್<br>ಪ್ರೊ ಶ್ರೀ ಎ.ನಾಗರಾಜ್<br>ಮಾಕಾರಹಳ್ಳಿ ಗ್ರಾಮ<br>ಮಾಲೂರು ತಾಲ್ಲೂಕು<br>ಕೋಲಾರ | ಮಾಲೂರು | ಮಾಕಾರಹಳ್ಳಿ | 197 | ಪಟ್ಟಾ / ಸರ್ಕಾರಿ | 3-18 |
| 7 | 1) 23.08.2013<br>2) 19.08.2016<br>3) 03.08.2021 | ಮೆ॥ ಗೌಂಡರ್ ಸ್ಟೋನ್ ಕ್ರಷರ್<br>ಶ್ರೀ ರಮೇಶ್‌ಗೌಡ.ಹೆಚ್.ಎಂ.<br>ಕೊರಚನೂರು ಗ್ರಾಮ<br>ಮಾಲೂರು | ಮಾಲೂರು | ಕೆಂಪನಹಳ್ಳಿ | 17 | ಸರ್ಕಾರಿ | 2-00 |
| 8 | 31-08-2018 | ಮೆ॥ ಎಸ್.ಎಂ.ಎಸ್. ಸ್ಟೋನ್ ಕ್ರಷರ್ ಮೊಹಮ್ಮದ್ ಜಾಫರ್<br>ಶಾಮಶೆಟ್ಟಹಳ್ಳಿ ಗ್ರಾಮ<br>ಮಾಲೂರು | ಮಾಲೂರು | ಶಾಮಶೆಟ್ಟಹಳ್ಳಿ | 104 | ಗೋಮಾಳ | 1-10 |

| ಕ್ರ. ಸಂ. | ಪ್ರಸ್ತುತ "ಸಿ" ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| 9 | 14-11-2018 | ಮೆ॥ ವೈ.ಎಸ್.ಆರ್. ಸ್ಟೋನ್ ಕ್ರಷರ್, ಆರ್.ಸತೀಶ್ ಯಲವಗುಳಿ ಗ್ರಾಮ ಮಾಲೂರು ತಾಲ್ಲೂಕು | ಮಾಲೂರು | ಮಾಕಾರಹಳ್ಳಿ | 185 | ಗೋಮಾಳ | 2-00 |
| 10 | 09.11.2018 | ಶ್ರೀ ಎನ್.ರಂಗನಾಥ್ ದೇಸಿಹಳ್ಳಿ ಗ್ರಾಮ ಬಂಗಾರಪೇಟೆ ತಾಲ್ಲೂಕು, ಕೋಲಾರ | ಮಾಲೂರು | ಬೆಟ್ಟಹಳ್ಳಿ | 06 | ಸರ್ಕಾರಿ | 2-00 |
| 11 | 17.12..018<br>20 ವರ್ಷ | ಮೆ॥ ಶ್ರೀ ವೆಂಕಟೇಶ್ವರ ಸ್ಟೋನ್ ಕ್ರಷರ್ ಪ್ರೊ.ಕೆ.ಎಸ್.ವೆಂಕಟೇಶಪ್ಪ ಮಾಕಾರಹಳ್ಳಿ ಗ್ರಾ ಮ ಮಾಲೂರು ತಾಲ್ಲೂಕು | ಮಾಲೂರು | ಮಾಕಾರಹಳ್ಳಿ | 185 | ಗೋಮಾಳ | 2-00 |
| 12 | 11-10-2013 | ಶ್ರೀ ವೆಂಕಟೇಶ್ವರ ಸ್ಟೋನ್ ಕ್ರಷರ್ ಶ್ರೀ ಎಂ.ವೆಂಕಟರಾಮ ರೆಡ್ಡಿ #36, ಮೇಸ್ತ್ರಪ್ಪ ಬಿಲ್ಡಿಂಗ್, 2ನೇ ಕ್ರಾಸ್, 80 ಫೀಟ್, ಹೆಣ್ಣೂರು ರೋಡ್, ಹೆಚ್.ಬಿ.ಆರ್. ಲೇಔಟ್, ಬೆಂಗಳೂರು-560084 | ಮಾಲೂರು | ಅಣಿಮಿಟ್ಟನಹಳ್ಳಿ | 68 | ಪಟ್ಟಾ | 2-00 |
| 13 | 35/2013-14<br>11-10-2013<br>ರಿಂದ 20 ವರ್ಷ<br>16-06-2020 | ಕೆ.ವೈ.ನಂಜೇಗೌಡ, ಕೋಮ್ಮನಹಳ್ಳಿ, ತೋರಲಕ್ಕಿ, ಮಾಲೂರು ತಾಲ್ಲುಕು, ಕೋಲಾರ | ಮಾಲೂರು | ಹರದಕೊತೂರು | 65 | ಪಟ್ಟಾ | 2-00 |
| 14 | 36/2013-14<br>11-10-2014<br>ರಿಂದ 20 ವರ್ಷ<br>16-06-2020 | ಕೆ.ವೈ.ಈರೇಗೌಡ, ಕೋಮ್ಮನಹಳ್ಳಿ, ತೋರಲಕ್ಕಿ, ಮಾಲೂರು ತಾಲ್ಲುಕು, ಕೋಲಾರ | ಮಾಲೂರು | ಹರದಕೊತೂರು | 30/<br>ಪಿ3 | ಪಟ್ಟಾ | 2-00 |
| 15 | 37/2013-14<br>11-10-2015<br>ರಿಂದ 20 ವರ್ಷ<br>16-06-2020 | ಮೆ॥ ಜೆ.ಪಿ.ಸ್ಟೋನ್ ಕ್ರಷರ್, ಸರ್ವೆ ನಂ.39, ಹರದಕೊತ್ತೂರು, ಗ್ರಾಮ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ. | ಮಾಲೂರು | ಹರದಕೊತೂರು | 39 | ಪಟ್ಟಾ | 2-00 |
| 16 | 07/2014-15<br>30-10-2014<br>ರಿಂದ 20 ವರ್ಷ | ಮೆ॥ ಶ್ರೀ ವೆಂಕಟೇಶ್ವರ ಸ್ಟೋನ್ ಕ್ರಷರ್ ಪ್ರೊ ಶ್ರೀ ಬಿ.ಪಾಪರಾವ್ ಅಣೆಮಿಟ್ನಹಳ್ಳಿ ಗ್ರಾ ಮ ಮಾಲೂರು ತಾಲ್ಲೂಕು ಕೋಲಾರ | ಮಾಲೂರು | ಅಣಿಮಿಟ್ಟನಹಳ್ಳಿ | 33ಪಿ33 | ಪಟ್ಟಾ | 1-00 |

| ಕ್ರ ಸಂ. | ಪ್ರಸ್ತುತ 'ಸಿ' ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| 17 | 03/2014-15<br>01.10.2014<br>ರಿಂದ 20 ವರ್ಷ<br>16-06-2020 | ಶ್ರೀ.ಕೆ.ಎಸ್.ವೆಂಕಟೇಶ್ವಪ್ಪ<br>ಶ್ರೀ ವೆಂಕಟೇಶ್ವರ ಸ್ಟೋನ್ ಕ್ರಷರ್<br>ಅಣಿಮಿಟ್ಟಹಳಿ, ಮಾಲೂರು ತಾಲ್ಲೂಕು | ಮಾಲೂರು | ಅಣಿಮಿಟ್ಟನಹಳ್ಳಿ | 58/4 | ಪಟ್ಟಾ | 3-00 |
| 18 | 45/2013-14<br>11-10-2013<br>ರಿಂದ 20 ವರ್ಷ | ಮೆ॥ ವೆಂಗಮಾಂಬ ಸ್ಟೋನ್ ಕ್ರಷರ್<br>ಹರದಕೊತ್ತೂರು ಗ್ರಾ ಮ<br>ತೊರಲಕ್ಕಿ ಅಂಚೆ<br>ಟೇಕಲ್ ಹೋಬಳಿ, ಮಾಲೂರು ತಾಲ್ಲೂಕು | ಮಾಲೂರು | ಹರದಕೊತೂರು | 11/2 | ಪಟ್ಟಾ | 2-00 |
| 19 | 2013-14<br>14-03-2013<br>ರಿಂದ 20 ವರ್ಷ | ಶ್ರೀ ಎಂ.ಎಸ್.ಭರತ್‌ಕುಮಾರ್<br>ಬಿನ್ ಶ್ರೀ ಎಂ.ವಿ.ಸೋಮಶೇಖರ್<br>ಮಾಲೂರು ಟೌನ್, ಮಾಲೂರು | ಮಾಲೂರು | ಹರದಕೊತೂರು | 02 | ಸರ್ಕಾರಿ | 2-00 |
| 20 | 2015-16<br>21/05/2015<br>15-05-2021 | ಬ್ಲೂ ಸ್ಟೋನ್ ಪ್ರಾಡಕ್ಟ್ಸ್<br>ಶಾಮಶೆಟ್ಟಹಳ್ಳಿ ಗ್ರಾಮ<br>ಮಾಸ್ತಿ ಹೋಬಳಿ, ಮಾಲೂರು | ಮಾಲೂರು | ಶಾಮಶೆಟ್ಟಹಳ್ಳಿ | 104/ಪಿ5 | ಪಟ್ಟಾ | 2-00 |
| 21 | 03/2014-15<br>01-10-2014<br>ರಿಂದ 20 ವರ್ಷ<br>29-06-2021 | ಶ್ರೀ ಬಾಲಾಜಿ ಸ್ಟೋನ್ ಕ್ರಷರ್<br>ಶ್ರೀಮತಿ ಎನ್.ಉಮಾ<br>ಕೋಂ. ವೇಣು ಗೋಪಾಲ್ .ಎಸ್.ಹೆಚ್.<br>ದೊಡ್ಡಶಿವಾರ ಗ್ರಾಮ, ಮಾಲೂರು ತಾಲ್ಲೂಕು | ಮಾಲೂರು | ಹುಂಗೇನಹಳ್ಳಿ | 28 | ಪಟ್ಟಾ | 2-00 |
| 22 | 2020-21<br>24-08-2020 | ಶ್ರೀ ಜಾರ್ಜ್ ಅಬ್ರಹಮ್<br>ಮೇನೆಜಿಂಗ್ ಪಾರ್ಟನರ್<br>ನಂ. 234, ದೊಡ್ಡಕಲ್ಲಸಂದ್ರ<br>ನಾರಾಯಣನಗರ, ಕನಕಪುರ ಮೇನ್‌ರೋಡ್, ಬೆಂಗಳೂರು-560062 | ಮಾಲೂರು | ಶಾಮಶೆಟ್ಟಹಳ್ಳಿ | 104 | ಪಟ್ಟಾ | 2-30 |
| 23 | 2022-23<br>13-05-2022<br>20 ವರ್ಷ | ಶ್ರೀ.ವೈ.ಆರ್.ಶಶೀಧರ್<br>ಮಾಕಾರಹಳ್ಳಿ ಗ್ರಾ ಮ<br>ಮಾಲೂರು ತಾಲ್ಲೂಕು<br>ಕೋಲಾರ ಜಿಲ್ಲೆ | ಮಾಲೂರು | ಮಾಕಾರಹಳ್ಳಿ | 185 | ಸರ್ಕಾರಿ | 2-00 |

| ಕ್ರ. ಸಂ. | ಪ್ರಸ್ತುತ 'ಸಿ' ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| 24 | 2022-23<br>15-09-2021<br>ರಿಂದ 14-09-2023<br>2 ವರ್ಷ | ಮೆ॥ ದಿಲೀಪ್ ಬಿಲ್ಡ್ ಕಾನ್ ಲಿಮಿಟೆಡ್<br>#07, ವಾರ್ಡ್ ನಂ. 20,<br>ಗೋರುರಮ್ಮ ಲೇಔಟ್,<br>ಆದರ್ಶನಗರ<br>ಮಾಲೂರು ತಾಲ್ಲೂಕು | ಮಾಲೂರು | ಬೆಳ್ಳಾವಿ | 85 | ಪಟ್ಟಾ | 2-00 |
| 25 | 2022-23<br>21-12-2022<br>ರಿಂದ<br>31-03-2042 | ಶ್ರೀ.ಕೆ.ಎಸ್.ವೆಂಕಟೇಶಪ್ಪ<br>ಬಿನ್ ಸುಬ್ಬಣ್ಣ<br>ಕ್ಷೇತ್ರನಹಳ್ಳಿ ಗ್ರಾ ಮ<br>ಮಾಲೂರು ತಾಲ್ಲೂಕು | ಮಾಲೂರು | ಮಾಕಾರಹಳ್ಳಿ | 185 | ಸರ್ಕಾರಿ ಗೋಮಾಳ | 2-00 |
| 26 | 2022-23<br>21-02-2023<br>ರಿಂದ 20-02-2025<br>2 ವರ್ಷ | ಮೆ॥ ಸ್ಕೈ ಲಾರ್ಕ್ ಇನ್ಫ್ರಾ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್<br>ಶ್ರೀ. ರಾಜು ಲಿಂಬಾಜಿ ರಾತೋಡ್<br>Authorized Represenţive<br>ಲಕ್ಕೂರು ಹೋಬಳಿ, ಮಾಲೂರು ತಾಲ್ಲೂಕು | ಮಾಲೂರು | ಲಕ್ಕೂರು | 312/1<br>313/3 | ಪಟ್ಟಾ | 1-28 |
| 27 | 2022-23<br>15-09-2021<br>ರಿಂದ 14-09-2023<br>2 ವರ್ಷ | ಮೆ॥ ದಿಲೀಪ್ ಬಿಲ್ಡ್ ಕಾನ್ ಲಿಮಿಟೆಡ್<br>#07, ವಾರ್ಡ್ ನಂ. 20,<br>ಗೋರುರಮ್ಮ ಲೇಔಟ್,<br>ಆದರ್ಶನಗರ<br>ಮಾಲೂರು ತಾಲ್ಲೂಕು | ಮಾಲೂರು | ದೊಡ್ಡ ಸಬ್ಬೇನಹಳ್ಳಿ | 85 | ಪಟ್ಟಾ | 2-18 |

## ಮುಳಬಾಗಿಲು ತಾಲ್ಲೂಕು

| | | | | | | | |
|---|---|---|---|---|---|---|---|
| 1 | 1). 11-10-2013<br>2). 26-12-2018 | ಶ್ರೀ ಬಾಲಾಜಿ ಕ್ರಷರ್<br>ಪ್ರೊ ಬಾಲಾಜಿ ಸಿಂಗ್<br>ಯಳಗೊಂಡಹಳ್ಳಿ ಗ್ರಾಮ<br>ದೇವರಾಯಸಮುದ್ರ ಪಂಚಾಯತ್<br>ಮುಳಬಾಗಿಲು ತಾಲ್ಲೂಕು | ಮುಳಬಾಗಿಲು | ಯಳಗೊಂಡನಹಳ್ಳಿ | 69 | ಪಟ್ಟಾ | 2-00 |
| 2 | 1). 11-10-2013<br>2). 14-11-2018 | ಮೆ॥ ಎಸ್.ವಿ.ಎಸ್. ಅಸೋಸಿಯೇಟ್ಸ್<br>ಯಳಗೊಂಡನಹಳ್ಳಿ ಗ್ರಾಮ<br>ಮುಳಬಾಗಿಲು ತಾಲ್ಲೂಕು | ಮುಳಬಾಗಿಲು | ಯಳಗೊಂಡನಹಳ್ಳಿ | 68 | ಪಟ್ಟಾ | 1-27 |
| 3 | 1). 10-01-2019 | ಮೆ॥ ಜಿ.ವಿ.ವಿ. ಸ್ಟೋನ್ ಕ್ರಷರ್<br>ಪ್ರೊ ಶ್ರೀ ವಿ.ರಾಜೇಶ್<br>ದೇವರಾಯಸಮುದ್ರ ಗ್ರಾಮ<br>ಮುಳಬಾಗಿಲು ತಾಲ್ಲೂಕು | ಮುಳಬಾಗಿಲು | ದೇವರಾಯಸಮುದ್ರ | 758 | ಪಟ್ಟಾ | 2-00 |

| ಕ್ರ ಸಂ. | ಪ್ರಸ್ತುತ 'ಚಿ' ಫಾರಂ ಪಡೆದು ಕಾರ್ಯನಿರ್ವಹಿಸುತ್ತಿರುವ ಜಲ್ಲಿ ಕ್ರಷರ್ ಘಟಕಗಳ ಸಂಖ್ಯೆ | ಕ್ರಷರ್ ಮಾಲೀಕರ ಹೆಸರು ಮತ್ತು ವಿಳಾಸ | ತಾಲ್ಲೂಕು | ಗ್ರಾಮ | ಸರ್ವೆ ನಂ. | ಸರ್ಕಾರಿ/ ಪಟ್ಟಾ | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|---|---|---|
| | 1 | 2 | 3 | 4 | 5 | 6 | 7 |
| 4 | 1) 11-10-2013<br>2) 15-05-2019 | ಮೆ॥ ಮಿಲೇನಿಯಂ ಸ್ಟೋನ್ ಕ್ರಷರ್<br>ಪ್ರೊ ಶ್ರೀ ಎಸ್.ಕುಮಾರ್<br>ದೇವರಾಯಸಮುದ್ರ ಗ್ರಾಮ<br>ಮುಳಬಾಗಿಲು ತಾಲ್ಲೂಕು | ಮುಳಬಾಗಿಲು | ದೇವರಾಯಸಮುದ್ರ | 790 | ಪಟ್ಟಾ | 1-14 |
| 5 | 2022-23/253-258<br>22-04-2022<br>ರಿಂದ<br>17-01-2024 | ಮೆ॥ ಕೆ.ಸಿ.ಸಿ. ಬಿಲ್ಡ್‌ಕಾನ್ ಪ್ರೈ.ಲಿ.<br>ವೆಂಕಟಾಪುರ ಹೋಬಳಿ<br>ಬೇತಮಂಗಲ ತಾಲ್ಲೂಕು<br>ಕೆ.ಜಿ.ಎಫ್ ಜಿಲ್ಲೆ | ಮುಳಬಾಗಿಲು | ಬಂಡಹಳ್ಳಿ | 57 | ಸರ್ಕಾರಿ ಹುಲ್ಲು ಮನಿ | 12-00 |

## ಶ್ರೀನಿವಾಸಪುರ ತಾಲ್ಲೂಕು

| | | | | | | | |
|---|---|---|---|---|---|---|---|
| 1 | 10-05-2019 | ಜೆ.ಎನ್.ಸ್ಟೋನ್ ಪ್ರಾಡಕ್ಟ್ಸ್<br>ಪ್ರೊ ಜಯರಾಮ ನಾಯ್ಡು<br>ಕೊಂಡಮಾರಿ ಗ್ರಾಮ<br>ಶ್ರೀನಿವಾಸಪುರ ತಾಲ್ಲೂಕು<br>ಕೋಲಾರ | ಶ್ರೀನಿವಾಸಪುರ | ಕೊಂಡಮಾರಿ | 104 | ಗೋಮಾಳ | 2-00 |

## ಕೆ.ಜಿ.ಎಫ್ ತಾಲ್ಲೂಕು

| | | | | | | | |
|---|---|---|---|---|---|---|---|
| 1 | 15-05-2021 | ವಿಜೇಂದ್ರ ಎಂಟರ್‌ಪ್ರೈಸಸ್<br>ಕಾವೇರಹಳ್ಳಿ ಗ್ರಾ ಮ<br>ಕೆ.ಜಿ.ಎಫ್ ತಾಲ್ಲೂಕು | ಕೆ.ಜಿ.ಎಫ್ | ಕಾವೇರಹಳ್ಳಿ | 115 | ಪಟ್ಟಾ | 1-00 |

CI-MMN/234/2023

Deputy Director (Min. Admn)
Dept. of Mines & Geology
Bangalore-560001

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ವೈ.ಎ. ನಾರಾಯಣಸ್ವಾಮಿ
(ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 152 ಕ್ಕೆ ಪೂರಕ ಟಿಪ್ಪಣಿ

<u>ವಿಷಯ:</u> ಗಣಿಗಾರಿಕೆ, ಜಲ್ಲಿ ಕ್ರಷರ್ ಕುರಿತು

******

(i) ರಾಜ್ಯದಲ್ಲಿ ನಿರ್ದಿಷ್ಟಪಡಿಸಿದ ಉಪಖನಿಜಗಳ ಸಂಬಂಧ 641 ಗುತ್ತಿಗೆಗಳನ್ನು 3352 ಎಕರೆ ಪ್ರದೇಶದಲ್ಲಿ ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ 406 ಗುತ್ತಿಗೆಗಳು 2369 ಎಕರೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 235 ಗುತ್ತಿಗೆಗಳು 983 ಎಕರೆ ಪ್ರದೇಶದಲ್ಲಿ ನಿಷ್ಕ್ರಿಯವಾಗಿರುತ್ತವೆ.

(ii) ನಿರ್ದಿಷ್ಟವಲ್ಲದ ಉಪಖನಿಜಗಳ ಗಣಿಗಾರಿಕೆಗಾಗಿ 2802 ಗುತ್ತಿಗೆಗಳನ್ನು 10548 ಎಕರೆ ಪ್ರದೇಶದಲ್ಲಿ ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ 2101 ಗುತ್ತಿಗೆಗಳು 7773 ಎಕರೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದು, 701 ಗುತ್ತಿಗೆಗಳು 2775 ಎಕರೆ ಪ್ರದೇಶದಲ್ಲಿ ನಿಷ್ಕ್ರಿಯವಾಗಿರುತ್ತವೆ.

(iii) ರಾಜ್ಯದಲ್ಲಿ ಸ್ಟೋನ್ ಕ್ರಷರ್ ಕಾರ್ಯಾಚರಣೆಗಾಗಿ 2132 ಲೈಸೆನ್ಸ್ ಗಳನ್ನು ಮಂಜೂರು ಮಾಡಲಾಗಿರುತ್ತದೆ. ಇವುಗಳ ಪೈಕಿ 692 ಎಂ-ಸ್ಯಾಂಡ್ ಘಟಕಗಳು ಘಟಕಗಳಿರುತ್ತವೆ.

(iv) ಮುಖ್ಯ ಖನಿಜ ಹಾಗೂ ಉಪಖನಿಜಗಳಿಗೆ ಸಂಬಂಧಿಸಿದಂತೆ 2018-19 ರಿಂದ 2023-24 (ಅಕ್ಟೋಬರ್-2023 ಅಂತ್ಯದವರೆಗೆ) ಸಂಗ್ರಹಿಸಿರುವ ರಾಜಧನದ ವಿವರಗಳು

(₹ಕೋಟಿಗಳಲ್ಲಿ)

| ಕ್ರ.ಸಂ. | ವರ್ಷ | ರಾಜಸ್ವ ಗುರಿ | | | ಸಂಗ್ರಹಿಸಿದ ರಾಜಧನ | | ಒಟ್ಟು ಸಂಗ್ರಹಣೆ | ಶೇಕಡವಾರು |
|---|---|---|---|---|---|---|---|---|
| | | ಒಟ್ಟು ಗುರಿ | ಮುಖ್ಯ ಖನಿಜ ಗುರಿ | ಉಪಖನಿಜ ಗುರಿ | ಮುಖ್ಯ ಖನಿಜ | ಉಪ ಖನಿಜ | | |
| 1 | 2018-19 | 3000.00 | 1518.00 | 1482.00 | 1405.79 | 1620.63 | 3026.42 | 101 |
| 2 | 2019-20 | 3550.00 | 1820.00 | 1730.00 | 1816.67 | 1812.35 | 3629.02 | 102 |
| 3 | 2020-21 | 3750.00 | 2020.00 | 1730.00 | 1974.66 | 1918.78 | 3893.44 | 103 |
| 4 | 2021-22 | 357.00 | 2623.00 | 1734.00 | 4092.80 | 2215.51 | 6308.31 | 145 |
| 5 | 2022-23 | 6500.00 | 4300.00 | 2200.00 | 3374.86 | 2570.91 | 5945.77 | 91 |
| 6 | 2023-24 (ಅಕ್ಟೋಬರ್-2023 ರವರೆಗೆ) | 5130.00 | 3135.00 | 1995.00 | 2833.97 | 970.60 | 3804.57 | 74 |
| 7 | 2023-24 (Overall) | 9000.00 | 5500.00 | 3500.00 | 2833.97 | 970.60 | 3804.57 | 42 |

...2

(v) ಸ್ಟೋನ್ ಕ್ರಷರ್ ಘಟಕಗಳ ಲೈಸೆನ್ಸ್ ಮಂಜೂರಾತಿಗೆ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಗಳು, 2012 ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಲ್ಲಿ ಮಂಡಿಸಿ, ಅರ್ಜಿತ ಪ್ರದೇಶದಲ್ಲಿ ಕಲಂ-6ರ ಷರತ್ತುಗಳು ಪೂರೈಕೆಯಾದಲ್ಲಿ, ಪ್ರಾಧಿಕಾರದಿಂದ ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿದ ನಂತರ ಕ್ರಷರ್ ಸುರಕ್ಷತಾ ವಲಯ ಪಾಲನಾ ಪ್ರಮಾಣ ಪತ್ರವನ್ನು (ಫಾರಂ-ಬಿ1) ನೀಡಲಾಗುತ್ತಿದೆ.

1. ಕ್ರಷರ್ ಸುರಕ್ಷಿತ ವಲಯವು ರಾಷ್ಟ್ರೀಯ ಹೆದ್ದಾರಿ/ರಾಜ್ಯ ಹೆದ್ದಾರಿಯಿಂದ 200 ಮೀಟರ್ ಅಂತರ ಇರತಕ್ಕದ್ದು.
2. ಜಿಲ್ಲಾ ಮುಖ್ಯ ರಸ್ತೆಗಳಿಂದ 100 ಮೀಟರ್ ಹಾಗೂ ಇತರೆ ರಸ್ತೆಗಳಿಂದ 50 ಮೀಟರ್ ಅಂತರ ಇರತಕ್ಕದ್ದು.
3. ಗ್ರಾಮ, ಶಾಲೆ, ದೇವಸ್ಥಾನಗಳಿಂದ 500 ಮೀಟರ್. ಅಂತರ ಇರತಕ್ಕದ್ದು.
4. ನಗರ ಸಭೆ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ ಹೊರಗೆ ಇರತಕ್ಕದ್ದು.

(vi) ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent of Establishment (CFE) ಹಾಗೂ Consent for Operation (CFO) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಕ್ರಷರ್ ಲೈಸೆನ್ಸ್ (ಫಾರಂ-ಸಿ) ನ್ನು ಮಂಜೂರು ಮಾಡಲಾಗುತ್ತಿದೆ.

(vii) ದಿನಾಂಕ 17.03.2023 ರಂದು ಕೆಎಂಎಂಸಿ (ತಿದ್ದುಪಡಿ) ನಿಯಮಗಳು, 2023ನ್ನು ಜಾರಿಗೆ ತಂದಿದ್ದು, ದಿನಾಂಕ 12.08.2016 ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಕೋರಿ ಸಲ್ಲಿಸಿದ್ದ ಅರ್ಜಿಗಳನ್ನು ಗುತ್ತಿಗೆ ಮಂಜೂರಾತಿಗೆ ಪರಿಗಣಿಸಲು ನಿಯಮ ರೂಪಿಸಿದೆ.

(viii) ದಿನಾಂಕ 12.08.2016 ರ ಪೂರ್ವದಲ್ಲಿ ಅಲಂಕಾರಿಕ ಶಿಲೆ ಗಣಿಗಾರಿಕೆಗೆ ಗುತ್ತಿಗೆ ಕೋರಿ 1723 ಅರ್ಜಿಗಳು ಮತ್ತು ಕಟ್ಟಡ ಕಲ್ಲುಗಣಿ ಗುತ್ತಿಗೆ ಕೋರಿ 4040 ಅರ್ಜಿಗಳು ಸ್ವೀಕೃತಗೊಂಡು ಪರಿಗಣನೆಗೆ ಅರ್ಹವಾಗಿದ್ದು, ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಮಂಜೂರಾತಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ಪಡೆದು ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮವಹಿಸಬೇಕಾಗಿರುತ್ತದೆ.

(ix) ಇದಲ್ಲದೆ, ಕೆಎಂಎಂಸಿ (ತಿದ್ದುಪಡಿ) ನಿಯಮಗಳು, 2016 ಮತ್ತು 2023 ರ ನಿಯಮ 31-ZC ರಂತೆ ಎಂ-ಸ್ಯಾಂಡ್ ತಯಾರಿಸುವ ಉದ್ದೇಶಕ್ಕಾಗಿ ಎಂ-ಸ್ಯಾಂಡ್ ಘಟಕದ ಮಾಲೀಕರಿಗೆ ಅಥವಾ ಎಂ-ಸ್ಯಾಂಡ್ ಘಟಕ ಸ್ಥಾಪಿಸಲು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Operation (CFO) ಮತ್ತು Consent for Establishment (CFE) ಪಡೆದಿರುವವರಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಹರಾಜು ರಹಿತವಾಗಿ ಮಂಜೂರಾತಿ ನೀಡಲು ಅವಕಾಶ ಕಲ್ಪಿಸಿದೆ.

(x) [illegible] ರಹಿತವಾಗಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ 1155 ಅರ್ಜಿಗಳು ಸ್ವೀಕೃತಗೊಂಡಿದ್ದು, ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡುವ ಪ್ರಕ್ರಿಯೆ ಸಂಬಂಧ ಕ್ರಮ ವಹಿಸಲಾಗುತ್ತಿದೆ.

(xi) ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಕಲ್ಲು ಗಣಿಚಟುವಟಿಕೆಗಳ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಸದರಿಯವರ ವಿರುದ್ಧ ಎಂ.ಎಂ. (ಡಿ & ಆರ್) ಕಾಯ್ದೆ, 1957 ಮತ್ತು ಕೆಎಂಎಂಸಿ ನಿಯಮಗಳು, 1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದೆ.

(xii) ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಉಪಖನಿಜಗಳ ಗಣಿಗಾರಿಕೆಗೆ ಸಂಬಂಧಿಸಿದಂತೆ ಪತ್ತೆ ಹಚ್ಚಿದ ಪ್ರಕರಣಗಳು, ದಾಖಲಿಸಿದ ಮೊಕದ್ದಮೆಗಳು ಹಾಗೂ ಸಂಗ್ರಹಿಸಲಾದ ದಂಡದ ಮೊತ್ತದ ವಿವರಗಳು ಈ ಕೆಳಕಂಡಂತಿದೆ:

**ಅನಧಿಕೃತ ಕಲ್ಲುಗಣಿಗಾರಿಕೆ:-**

| ಕ್ರ. ಸಂ. | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ | ದಾಖಲಿಸಿರುವ ಮೊಕದ್ದಮೆಗಳು |
|---|---|---|---|---|
| 1. | 2020-21 | 555 | 1576.62 | 149 |
| 2. | 2021-22 | 476 | 668.87 | 162 |
| 3. | 2022-23 | 607 | 728.98 | 192 |
| ಒಟ್ಟು | | 1638 | 2974.47 | 503 |

**ಅನಧಿಕೃತ ಕಲ್ಲು ಸಾಗಾಣಿಕೆ :-**

| ಕ್ರ. ಸಂ. | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (₹ಲಕ್ಷಗಳಲ್ಲಿ | ದಾಖಲಿಸಿರುವ ಮೊಕದ್ದಮೆಗಳು |
|---|---|---|---|---|
| 1. | 2020-21 | 2538 | 895.01 | 163 |
| 2. | 2021-22 | 2195 | 756.07 | 47 |
| 3. | 2022-23 | 2312 | 838.55 | 17 |
| ಒಟ್ಟು | | 7045 | 2489.63 | 227 |

**ಅನಧಿಕೃತ ಕಲ್ಲು ದಾಸ್ತಾನು :-**

| ಕ್ರ. ಸಂ. | ವರ್ಷ | ಪತ್ತೆಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ (ರೂ.ಲಕ್ಷಗಳಲ್ಲಿ | ದಾಖಲಿಸಿರುವ ಮೊಕದ್ದಮೆಗಳು |
|---|---|---|---|---|
| 1. | 2020-21 | 93 | 617.26 | 9 |
| 2. | 2021-22 | 58 | 35.14 | 3 |
| 3. | 2022-23 | 58 | 30.51 | 19 |
| ಒಟ್ಟು | | 209 | 682.91 | 31 |

...4

(xiii) ಕೋಲಾರ ಜಿಲ್ಲೆಯಲ್ಲಿ ಪ್ರಸ್ತುತ 2023-24 ರವರೆಗೆ 114 ಕಲ್ಲು ಗಣಿ ಗುತ್ತಿಗೆ ಮಂಜೂರಾಗಿರುತ್ತದೆ ಹಾಗೂ 40 ಕ್ರಷರ್ ಘಟಕಗಳು ಚಾಲ್ತಿಯಲ್ಲಿರುತ್ತವೆ. ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತವೆ.

ಘೋಷ್ವಾರೆ

ಕೋಲಾರ ಜಿಲ್ಲೆಯಲ್ಲಿ 2023-24 ನೇ ಸಾಲಿನ ಕಲ್ಲುಗಣಿ ಗುತ್ತಿಗೆ ವಿವರಗಳು

| ಕ್ರ. ಸಂ | ತಾಲ್ಲೂಕು | ಮಂಜೂರು ಮಾಡಿರುವ ಒಟ್ಟು ಕಲ್ಲುಗಣಿ ಗುತ್ತಿಗೆ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆಗಳ ಸಂಖ್ಯೆ | ನಿಷ್ಕ್ರಿಯೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ |
|---|---|---|---|---|
| 1 | ಬಂಗಾರಪೇಟೆ | 02 | 02 | 00 |
| 2 | ಕೆ.ಜಿ.ಎಫ್ | 01 | 00 | 01 |
| 3 | ಕೋಲಾರ | 31 | 26 | 05 |
| 4 | ಮಾಲೂರು | 61 | 38 | 23 |
| 5 | ಮುಳಬಾಗಿಲು | 15 | 06 | 09 |
| 6 | ಶ್ರೀನಿವಾಸಪುರ | 04 | 00 | 04 |
| ಒಟ್ಟು | | 114 | 72 | 42 |

ಘೋಷ್ವಾರೆ

2023-24 ನೇ ಸಾಲಿನ ಸ್ಟೋನ್ ಕ್ರಷರ್ ಘಟಕಗಳ ವಿವರಗಳು

| ಕ್ರ. ಸಂ. | ತಾಲ್ಲೂಕು | ಕ್ರಷರ್ ಘಟಕಗಳ ಸಂಖ್ಯೆ | ಚಾಲ್ತಿಯಲ್ಲಿರುವ ಘಟಕಗಳು | ನಿಷ್ಕ್ರಿಯವಾಗಿರುವ ಸ್ಟೋನ್ ಕ್ರಷರ್ ಘಟಕಗಳು |
|---|---|---|---|---|
| 1 | ಬಂಗಾರಪೇಟೆ | 1 | 1 | 0 |
| 2 | ಕೋಲಾರ | 5 | 5 | 0 |
| 3 | ಮಾಲೂರು | 27 | 20 | 7 |
| 4 | ಮುಳಬಾಗಿಲು | 5 | 5 | 0 |
| 5 | ಶ್ರೀನಿವಾಸಪುರ | 1 | 1 | 0 |
| 6 | ಕೆ.ಜಿ.ಎಫ್ | 1 | 0 | 1 |
| ಒಟ್ಟು | | 40 | 32 | 8 |

. . . 5

(xiv) ಕಳೆದ ಮೂರು ವರ್ಷಗಳ ವಾರ್ಷಿಕ ಗುರಿ ಹಾಗೂ ಪ್ರಗತಿ ಕಲ್ಲು ಗಣಿ ಗುತ್ತಿಗೆಗಳಿಂದ ರಾಜಧನ ಪಾವತಿಸಿಕೊಂಡ ವಿವರಗಳು ಕೆಳಕಂಡಂತಿರುತ್ತದೆ.

| ಕ್ರ. ಸಂ. | ವರ್ಷ | ಗುರಿ (₹ಲಕ್ಷಗಳಲ್ಲಿ) | ಪ್ರಗತಿ (₹ಲಕ್ಷಗಳಲ್ಲಿ) |
|---|---|---|---|
| 1. | 2020-21 | 4000.00 | 2347.605 |
| 2. | 2021-22 | 3000.00 | 2959.9564 |
| 3. | 2022-23 | 4500.00 | 5270.09 |
| 4. | 2023-24 | 12200.00 | 2457.4259 |

(xv) ಅನಧಿಕೃತ ಸಾಗಾಣಿಕೆ ಮತ್ತು ಗಣಿಗಾರಿಕೆ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಂಡ ವಿವರಗಳು ಈ ಕೆಳಕಂಡಂತಿರುತ್ತದೆ.

| 2019-20 ರಿಂದ 2023-24ನೇ (ಆಗಸ್ಟ್-2023 ರವರೆಗೆ) ಸಾಲಿನಲ್ಲಿ ಕೋಲಾರ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆ ಮಾಡುತ್ತಿದ್ದ ವಾಹನಗಳ ವಿರುದ್ಧ ದಂಡ ವಿಧಿಸಿ ವಸೂಲಿ ಮಾಡಿರುವ ವಿವರ ಹಾಗೂ ಸಿ.ಆರ್.ಪಿ.ಸಿ 200 ರಡಿಯಲ್ಲಿ ಖಾಸಗಿ ಪ್ರಕರಣವನ್ನು ದಾಖಲಿಸಿರುವ ವಿವರ | | | | |
|---|---|---|---|---|
| ಕ್ರ. ಸಂ. | ವರ್ಷ | ಪ್ರಕರಣಗಳ ಸಂಖ್ಯೆ | ಒಟ್ಟು ದಂಡದ ಮೊತ್ತ (₹ಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ |
| 1 | 2019-20 | 87 | 2,902,400 | 6 |
| 2 | 2020-21 | 305 | 15,518,866 | 5 |
| 3 | 2021-22 | 160 | 8,453,839 | 3 |
| 4 | 2022-23 | 256 | 14,617,935 | 0 |
| 5 | 2023-24 | 107 | 6,911,478 | 1 |
| ಒಟ್ಟು | | 915 | 4,84,04,518 | 15 |

(xvi) ಸರ್ಕಾರದ ನಿರ್ದೇಶನದ ಮೇರೆಗೆ KSRSAC ರವರಿಂದ ಕೋಲಾರ ಜಿಲ್ಲೆಯಲ್ಲಿನ ಚಾಲ್ತಿ ಕಲ್ಲು ಗಣಿ ಗುತ್ತಿಗೆಗಳ Reduced Level ನಿಗದಿಪಡಿಸಲು 85 ಕಲ್ಲು ಗಣಿ ಗುತ್ತಿಗೆಗಳ ಡ್ರೋಣ್ ಸರ್ವೆ ಕಾರ್ಯ ಪೂರ್ಣಗೊಂಡಿರುತ್ತದೆ. ವರದಿ ನೀಡಲು ಬಾಕಿ ಇರುತ್ತದೆ.

*********************************